ಕರ್ನಾಟಕ ಸರ್ಕಾರ
ಕೃಷಿ ಇಲಾಖೆ

ಸಂಖ್ಯೆ ಕೃಇ/ಆತ್ಮ/ಆಡಳಿತ/ನಿಯೋಜನೆ/2014-15

ಕೃಷಿ ಆಯುಕ್ತಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-1
ದಿನಾಂಕ 27.05.2014

## ಕಛೇರಿ ಆದೇಶ

ವಿಷಯ: ಆತ್ಮ ಯೋಜನೆಯನ್ನು ಜಿಲ್ಲಾ ಹಾಗೂ ಕ್ಷೇತ್ರಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಬಗ್ಗೆ ವೃಂದ ಬಲದಲ್ಲಿನ ಪರಿಷ್ಕರಣೆ ಕುರಿತು

ಉಲ್ಲೇಖ:ಕೇಂದ್ರ ಸರ್ಕಾರದ ಪತ್ರ ಸಂಖ್ಯೆ 9-4/2008 ಎಇ ದಿ 03.03.2014 & ಭಾರತ ಸರ್ಕಾರದ ಕೃಷಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದ ದಿ 23.04.2014 ಸಭೆಯ ನಡವಳಿಗಳು

~*~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಆತ್ಮ ಯೋಜನೆಯಲ್ಲಿ ಪ್ರಸಕ್ತ ವರ್ಷ 2014-15 ರಿಂದ ಸಿಬ್ಬಂದಿ ವೃಂದ ಬಲದಲ್ಲಿ ಮಾರ್ಪಾಡು ಮಾಡಿ ಅನುಮೋದನೆ ನೀಡಿರುವುದನ್ನು ಉಲ್ಲೇಖದ ಪತ್ರದಲ್ಲಿ ತಿಳಿಯಪಡಿಸಿದೆ. ಯೋಜನೆಯ ಉದ್ದೇಶವು ರೈತರಿಗೆ ತಾಂತ್ರಿಕ ಮಾಹಿತಿ ಮತ್ತು ಸವಲತ್ತುಗಳು ತ್ವರಿತವಾಗಿ ತಲುಪಬೇಕೆಂಬುದನ್ನು ಪರಿಗಣಿಸಿ ಪ್ರತಿ ರೈತ ಸಂಪರ್ಕ ಕೇಂದ್ರದಲ್ಲಿ ಆತ್ಮ ಸಿಬ್ಬಂದಿಯನ್ನು ಗುತ್ತಿಗೆ ನೇಮಕಾತಿ ಮೂಲಕ ನಿಯೋಜಿಸುವುದಕ್ಕೆ ಕ್ರಮ ಜರುಗಿಸಲಾಗಿದೆ. ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿಯು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಉದ್ದೇಶದಿಂದ ಮತ್ತು ದಿನಾಂಕ 23.04.2014 ರ ಸಭೆಯ ನಿರ್ಣಯದಂತೆ ಆತ್ಮ ಯೋಜನೆ ಮಾರ್ಗಸೂಚಿ 2010 ರನ್ವಯ ಈ ಕೆಳಕಂಡಂತೆ ಕ್ರಮ ಜರುಗಿಸಲು ತೀರ್ಮಾನಿಸಿದೆ.

1. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಯೋಜನೆಯ ಯೋಜನಾ ನಿರ್ದೇಶಕರು ಹಾಗೂ ಜಿಲ್ಲಾ ನೋಡಲ್ ಅಧಿಕಾರಿಯಾಗಿ ನಿಯೋಜನೆಯಾಗಿ ಕಾರ್ಯನಿರ್ವಹಿಸುವರು.
2. ಯೋಜನೆ ಅನುಷ್ಠಾನ, ನಿರ್ವಹಣೆ ಮತ್ತು ಉಸ್ತುವಾರಿಯನ್ನು ಜಿಲ್ಲಾ ಕಛೇರಿಯಲ್ಲಿರುವ ಸಹಾಯಕ ಕೃಷಿ ನಿರ್ದೇಶಕರು(ಕೇಂದ್ರ ಸ್ಥಾನ) ಇವರನ್ನು ಉಪ ಯೋಜನಾ ನಿರ್ದೇಶಕರಾಗಿ ಕಾರ್ಯಾನುಷ್ಠಾನವನ್ನು ನಿಭಾಯಿಸುವಂತೆ ನಿಯೋಜಿಸಲಾಗಿದೆ.
3. ಒಂದು ವೇಳೆ ಜಿಲ್ಲೆಯು 5 ತಾಲ್ಲೂಕುಗಳಿಗಿಂತ ಹೆಚ್ಚಿದ್ದಲ್ಲಿ ಜಿಲ್ಲಾ ಕಛೇರಿಯಲ್ಲಿರುವ ಸಹಾಯಕ ಕೃಷಿ ನಿರ್ದೇಶಕರು(ವಿಷಯ ತಜ್ಞರು) ಇವರನ್ನು ಎರಡನೇ ಉಪ ಯೋಜನೆ ನಿರ್ದೇಶಕರಾಗಿ ಕಾರ್ಯಾನುಷ್ಠಾನ ಮಾಡುವ ಜವಾಬ್ದಾರಿಯನ್ನು ನಿಭಾಯಿಸುವಂತೆ ನಿಯೋಜಿಸಲಾಗಿದೆ.
4. ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಲೆಕ್ಕ ವಿಭಾಗದಲ್ಲಿ ಲಭ್ಯವಿರುವ ಒಬ್ಬ ಸಿಬ್ಬಂದಿಯು ಇನ್ನು ಮುಂದೆ ಆತ್ಮ ಯೋಜನೆಯ ಲೆಕ್ಕ ಪತ್ರಗಳ ನಿರ್ವಹಣೆಯನ್ನು ಅಕೌಂಟೆಂಟ್ ಕಮ್ ಕ್ಲರ್ಕ್ ಸ್ಥಾನದಲ್ಲಿ ಕಾರ್ಯ ನಿರ್ವಹಿಸಲು ನಿಯೋಜಿಸಲಾಗಿದೆ.
5. ಸಮೇತಿ ಉತ್ತರ ಮತ್ತು ಸಮೇತಿ ದಕ್ಷಿಣ ಕಛೇರಿಗಳಿಗೆ ಸಂಬಂಧಿಸಿದಂತೆ ಪ್ರತಿ ಸಮೇತಿಗೆ ನಾಲ್ವರು ಉಪ ನಿರ್ದೇಶಕರುಗಳ ಸ್ಥಾನಗಳಿಗೆ ಆಯಾ ಕೃಷಿ ವಿಶ್ವ ವಿದ್ಯಾನಿಲಯವು ಕನಿಷ್ಠ ಸಹಾಯಕ ಪ್ರಾಧ್ಯಾಪಕರ ಶ್ರೇಣಿಯಲ್ಲಿರುವ ತಜ್ಞರುಗಳನ್ನು ಹಾಗೂ ಒಬ್ಬ ಅಕೌಂಟೆಂಟ್ ಕಮ್ ಕ್ಲರ್ಕ್ ಸ್ಥಾನದಲ್ಲಿ ಕನಿಷ್ಠ ಸಹಾಯಕ ನಿಯಂತ್ರಾಣಾಧಿಕಾರಿ ಶ್ರೇಣಿಯಲ್ಲಿರುವ ಸಿಬ್ಬಂದಿಯನ್ನು ಎರವಲು ಸೇವೆಯಲ್ಲಿ ಪಡೆದುಕೊಂಡು ನಿಯೋಜಿಸುವ ಬಗ್ಗೆ ನಿರ್ದೇಶಕರು ಸಮೇತಿ ಇವರು ಕ್ರಮ ಕೈಗೊಳ್ಳಬೇಕು.

6. ಈ ಪ್ರಕಾರ ನಿಯೋಜನೆಯಾಗುವ ಉಪ ನಿರ್ದೇಶಕರು, ಯೋಜನಾ ನಿರ್ದೇಶಕರು, ಉಪ ಯೋಜನಾ ನಿರ್ದೇಶಕರು ಹಾಗೂ ಅಕೌಂಟೆಂಟ್ ಕಮ್ ಕ್ಲರ್ಕ್ ಇವರುಗಳು ಆತ್ಮ ಯೋಜನೆ ಮಾರ್ಗಸೂಚಿ 2010 ರನ್ವಯ ಸಂಬಂಧಿಸಿದ ಯೋಜನೆಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವಂತೆ ಸೂಚಿಸಲಾಗಿದೆ.

ಮೇಲೆ ತಿಳಿಸಿರುವಂತೆ ಆತ್ಮ ಯೋಜನೆ ಅನುಷ್ಠಾನಕ್ಕೆ ಸಮೇತಿ ಕಛೇರಿಗಳು ಸೇರಿದಂತೆ ಮೇಲ್ಕಂಡ ಅಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸುವ ಅಧಿಕಾರವನ್ನು ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಹಾಗೂ ಆಯಾ ಸಮೇತಿ ನಿರ್ದೇಶಕರುಗಳು ಹೊಂದಿರುತ್ತಾರೆ. ಇದರಂತೆ ನಿಯೋಜನೆಯಾಗುವ ಅಧಿಕಾರಿ/ಸಿಬ್ಬಂದಿಯ ಹೆಸರು,ವಿಳಾಸ,ದೂರವಾಣಿ ಇತ್ಯಾದಿ ಮಾಹಿತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಬೇಕು.

ಈ ಪ್ರಕಾರ ಎಲ್ಲಾ ರೀತಿಯ ನೇಮಕಾತಿ ಹಾಗೂ ನಿಯೋಜನೆಯ ಪ್ರಕ್ರಿಯೆಯು ದಿನಾಂಕ 07–.06.2014 ರೊಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಈ ದಿನಾಂಕದಿಂದ ಯೋಜನೆಯಲ್ಲಿ ಹೊಸದಾಗಿ ಎರವಲು ಸೇವೆಯಲ್ಲಿ ನಿಯೋಜನೆಗೊಂಡಿರುವ ಅಧಿಕಾರಿ/ಸಿಬ್ಬಂದಿ ಹಾಗೂ ಗುತ್ತಿಗೆ ಆಧಾರಿತ ಸಿಬ್ಬಂದಿಯು ಅಂದರೆ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು, ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ಮತ್ತು ಕಂಪ್ಯೂಟರ್ ಪ್ರೋಗ್ರಾಮರ್‌ಗಳು ಮಾತ್ರ ಕಾರ್ಯ ನಿರ್ವಹಿಸುವಂತೆ ಕ್ರಮ ವಹಿಸುವುದು. ಇದರಿಂದ ಹೊಸದಾಗಿ ನಿಯೋಜನೆಯಾಗಿರುವ ಹಾಗೂ ಗುತ್ತಿಗೆ ನೇಮಕಾತಿಯಲ್ಲಿ ಆಯ್ಕೆಗೊಂಡಿರುವ ಸಿಬ್ಬಂದಿಯು ಆಯಾ ಹುದ್ದೆಯನ್ನು ವಹಿಸಿಕೊಂಡ ತಕ್ಷಣದಿಂದ ಸದರಿ ಹುದ್ದೆಯಲ್ಲಿರುವ ಎಲ್ಲಾ ರೀತಿಯ ಗುತ್ತಿಗೆ ಆದಾರಿತ ಸಿಬ್ಬಂದಿ ಸೇವೆಯು ತಾನೇ ತಾನಾಗಿ ಆ ಕ್ಷಣದಿಂದ ರದ್ದಾಗುವುದೆಂದು ತಿಳಿಯಪಡಿಸಿದೆ. ಇದರನ್ವಯ ಉಲ್ಲೇಖದ ಪತ್ರ ದಿನಾಂಕ 03.03.2014 ರಲ್ಲಿ ಕೇಂದ್ರ ಸರ್ಕಾರವು ಸೂಚಿಸಿರುವಂತೆ ಸಂಬಂಧಪಟ್ಟ ಎಲ್ಲಾ ಗುತ್ತಿಗೆ ಆಧಾರಿತ ಸಿಬ್ಬಂದಿ/ಅಧಿಕಾರಿಗಳಿಗೆ ದಿನಾಂಕ 07.06.2014 ರಿಂದ ಅನ್ವಯವಾಗುವಂತೆ ಪರಿಷ್ಕೃತ ವೇತನವನ್ನು ಪಾವತಿಸಲು ಸೂಚಿಸಲಾಗಿದೆ. ಅಂದರೆ ಇಲ್ಲಿಯವರೆಗೂ ಯೋಜನೆಯಲ್ಲಿ ಸೇವಾ ನವೀಕರಣಗೊಂಡಿರುವ ಜಿಲ್ಲಾ, ತಾಲ್ಲೂಕು ಹಾಗೂ ಸಮೇತಿ ಮಟ್ಟದ ಎಲ್ಲಾ ರೀತಿಯ ಗುತ್ತಿಗೆ ಆಧಾರಿತ ಸಿಬ್ಬಂದಿ ಸೇವೆಯು ದಿನಾಂಕ 06.06.2014 ಕ್ಕೆ ರದ್ದಾಗುವುದೆಂದು ತಿಳಿಯಪಡಿಸಿದೆ.

ಈ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಕೇಂದ್ರ ಕಛೇರಿಗೆ ತ್ವರಿತವಾಗಿ ವರದಿ ಮಾಡುವುದು.

27.5.14

ಕೃಷಿ ಆಯುಕ್ತರು ಹಾಗೂ
ರಾಜ್ಯ ನೋಡಲ್ ಅಧಿಕಾರಿಗಳು (ಆತ್ಮ)

ಇವರಿಗೆ,

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು(30 ಜಿಲ್ಲೆಗಳು)/ನಿರ್ದೇಶಕರು ಸಮೇತಿ ಉತ್ತರ/ದಕ್ಷಿಣ ಕೃವಿವಿ ಬೆಂಗಳೂರು/ಧಾರವಾಡ ಇವರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ಆದರ ಪೂರ್ವಕ ಮಾಹಿತಿಗಾಗಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಬೆಂಗಳೂರು

ಪ್ರತಿಯನ್ನು ಕೃಷಿ ನಿರ್ದೇಶಕರು/ಅಕೃನಿ(ಮಾಸಂಅ)/ಜಂಕೃನಿ(ವಿ&ತ) ಬೆಂಗಳೂರು ಮಾಹಿತಿಗಾಗಿ ನೀಡಿದೆ.